ಮತ್ತು ಅವರ ಪಕ್ಕದಲ್ಲಿಯೇ ಷುಗರ್ ಫ್ಯಾಕ್ಟರಿಯವರ ಲೈನ್ ಹೋಗಿದೆ. ನಾವು ಷುಗರ್ ಫ್ಯಾಕ್ಟರಿಯವರನ್ನು ಕೇಳಿದ್ದೇನೆ. ಆದರೆ ಷುಗರ್ ಫ್ಯಾಕ್ಟರಿಯವರು ನಮಗೇ ನೀರು ಸಾಕಾಗುವುದಿಲ್ಲ, ಅಲ್ಲಿ ಲೈನನ್ನು ತೆಗೆಯುವುದಕ್ಕಾಗುವುದಿಲ್ಲ ಎಂದು ಹೇಳಿ ಅವರು ಪರ್ಮಿಷನ್ ಕೊಡುತ್ತಿಲ್ಲ. ಬಹಶಃ ಅವರು ಪರ್ಮಿಷನ್ನು ಕೊಟ್ಟಿದ್ದರೆ ಅಲ್ಲಿಂದ ಸ್ವಲ್ಪ ನೀರನ್ನು ಸರಬರಾಜು ಮಾಡಲು ಆಗುತ್ತಿತ್ತು. ಆದರೂ ಸಹ ಕೊಳವೆ ಬಾವಿಗಳನ್ನು ಹಾಕತಕ್ಕಂಥ ಕೆಲಸವನ್ನು ನಾವು ಕೈಗೆತ್ತಿಕೊಳ್ಳುತ್ತೇವೆ.

ಶ್ರಿ ಬಸವಂತರೆಡ್ಡಿ ಮೋತಕಪಲ್ಲಿ :- ಮಾನ್ಯ ಉಪಾಧ್ಯಕ್ಷಿಣಿಯವರೇ, ನಡೆದಿರುವ ಕೆಲಸ ಕನಿಷ್ಟ 25 ಪ್ರತಿ ಶತ ಮುಗಿದಿದೆ. ಅಲ್ಲಿ ಕುಡಿಯುವ ನೀರಿನ ಬಗ್ಗೆ ಕೆಲಸವನ್ನು ತೆಗೆದುಕೊಂಡರೂ ಸಹ 25 ಶತ ಮುಗಿದಿದೆ. ಆದರೆ ಈಗ ಸಧ್ಯಕ್ಕೆ ಮಾತ್ರ ಕುಡಿಯುವ ನೀರಿಗಾಗಿ ಬಹಳ ತೊಂದರೆಯುಂಟಾಗಿದೆ. ಅಲ್ಲದೆ ದನಕರುಗಳಿಗೆ ಮಾತ್ರ ಬಹಳ ತಾಪತ್ರಯವಾಗಿದೆ. ಅದಕ್ಕಾಗಿ ಈ ಸಿಮೆಂಟ್ ಕಾರ್ಖಾನೆಯವರು ಒಂದು ವೇಳೆ ನೀರನ್ನು ಕೊಡುವುದಕ್ಕೆ ತಯಾರಿಲ್ಲ ಎಂದು ಹೇಳಿದರೆ ನೀವು ಜನರಿಗೆ ನೀರನ್ನು ಕೊಡುವ ಬದಲು ಸಿಮೆಂಟ್ ಕಾರ್ಖಾನೆಯವರಿಗೆ ನೀರನ್ನು ಏತಕ್ಕೆ ಕೊಡುತ್ತೀರಿ ? ಅದರ ಸಲುವಾಗಿ ಸಿಮೆಂಟ್ ಕಾರ್ಖಾನೆಗಳ ಪರವಾನಗಿಯನ್ನು ರದ್ದುಪಡಿಸಿ ಈ ನಾಗರೀಕರಿಗೆ ನೀರನ್ನು ಕೊಡಬಾರದೇಕೆ ?

ಶ್ರಿ ಕೆ.ಜೆ.ಜಾರ್ಜ್ :- ಮಾನ್ಯ ಉಪಾಧ್ಯಕ್ಷಿಣಿಯವರೇ, ಅವರು ಸ್ವಂತ ಲೈನನ್ನು ಹಾಕಿಕೊಂಡಿದ್ದಾರೆ. ಅದು ನಮ್ಮ ಲೈನ್ ಅಲ್ಲ. ಅವರು ಬಹುಶಃ ಅವರ ಲೈನ್‌ನಲ್ಲಿ ತೆಗೆದುಕೊಳ್ಳಲು ಪರ್ಮಿಷನ್ ಕೊಡದಿದ್ದರೆ ನಾವು ನೀರನ್ನು ತೆಗೆಯುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ಮತ್ತೊಮ್ಮೆ ಬೇಕಾದರೆ ಸಿಮೆಂಟ್ ಫ್ಯಾಕ್ಟರಿಯವರನ್ನು ಸ್ವಲ್ಪ ನೀರನ್ನು ಕೊಡಿ ಎಂದು ಕೇಳಿಕೊಳ್ಳುತ್ತೇವೆ. ಮತ್ತೆ ಕೊಳವೆ ಬಾವಿಗಳನ್ನು ಹಾಕಿಸತಕ್ಕಂಥ ಕೆಲಸವನ್ನು ಕೂಡ ತೆಗೆದುಕೊಳ್ಳುತ್ತೇವೆ.

ಶ್ರಿ ಬಸಂತರೆಡ್ಡಿ ಮೋತಕಪಲ್ಲಿ :- ನೀರಿನ ಪರವಾನಗಿಯನ್ನು ಅವರಿಗೆ ರದ್ದುಮಾಡಬೇಕು. ಏತಕ್ಕೆ ತಾವು ನಾಗರೀಕರಿಗೆ ಈ ವ್ಯವಸ್ಥೆಯನ್ನು ಮಾಡಬಾರದು? ಮತ್ತು ಈಗ ಕೊಳವೆ ಬಾವಿಗಳನ್ನು ಕೊರೆಯುತ್ತಿದ್ದಾರೆ. ಅದು ಅಲ್ಲಿಯ ನಾಗರೀಕರನ್ನು ಅಥವಾ ಮುನಿಸಿಪಲ್ ಸದಸ್ಯರುಗಳನ್ನು ಕೇಳಿ ಹಾಕುವುದಿಲ್ಲ. ಅಧಿಕಾರಿಗಳು ತಮ್ಮ ಮನಸ್ಸಿಗೆ ಬಂದಂತೆ ಹಾಕುತ್ತಿದ್ದಾರೆ. ಆದರಿಂದ ಜನರಿಗೆ ಉಪಯೋಗವಾಗುವುದಿಲ್ಲ. ಇದರ ಬಗ್ಗೆ ಸಹ ತಾವು ಆದೇಶವನ್ನು ನೀಡಬೇಕು.

ಶ್ರಿ ಕೆ.ಜೆ.ಜಾರ್ಜ್:-ಕೊಳವೆ ಬಾವಿಗಳನ್ನು ತೆಗೆಸುವಾಗ ಶಾಸಕರನ್ನು ಮತ್ತು ಪುರಸಭಾಧ್ಯಕ್ಷರನ್ನು ಕೇಳಿ ಹಾಕಿ ಎಂದು ನಾನು ಆದೇಶವನ್ನು ಕೊಡುತ್ತೇನೆ.

ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳ ಸಂಖ್ಯೆ

(906) ಶ್ರಿ ರಾಮಲಿಂಗರೆಡ್ಡಿ (ಜಯನಗರ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಅ) ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಡಿಸೆಂಬರ್ 1991 ರ ಅಂತ್ಯದವರೆಗೆ ಎಷ್ಟು ಪ್ರಕರಣಗಳು ಬಾಕಿ ಇರುತ್ತವೆ ;

ಆ) ಜನವರಿ 1991 ರಿಂದ ಡಿಸೆಂಬರ್ 1991ರ ಅಂತ್ಯದವರೆಗೆ ಎಷ್ಟು ಪ್ರಕರಣಗಳು ವಿಲೇವಾರಿಯಾಗಿರುತ್ತವೆ ;

ಇ) ಬಹಳಷ್ಟು ಪ್ರಕರಣಗಳು ಬಾಕಿ ಇರಲು ಕಾರಣಗಳೇನು ;

ಈ) ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಯಾವುದಾದರೂ ನ್ಯಾಯಾಧೀಶರ ಹುದ್ದೆಗಳು ಖಾಲಿ ಇವೆಯೆ ;

ಉ) ಹಾಗಿದ್ದಲ್ಲಿ, ಬಾಕಿ ಇರುವ ಪ್ರಕರಣಗಳನ್ನು ವಿಲೇವಾರಿ ಮಾಡಲು, ನ್ಯಾಯಾಧೀಶರ ಮತ್ತು ಅಪರ ನ್ಯಾಯಾಧೀಶರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು (ನ್ಯಾಯಾಧೀಶರನ್ನು ನೇಮಕ ಮಾಡಲು)

ಕೇಂದ್ರ ಸರ್ಕಾರದ ಮನವೊಲಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್.ಬಂಗಾರಪ್ಪ (ಮುಖ್ಯ ಮಂತ್ರಿಗಳು)-

ಅ) ಉಚ್ಚ ನ್ಯಾಯಾಲಯವು ರಾಜ್ಯ ವಿಧಾನಮಂಡಲಕ್ಕೆ ಯಾವ ಮಾಹಿತಿಯನ್ನು ನೀಡಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ಆದುದರಿಂದ ಈ ಪ್ರಶ್ನೆಗೆ ಉತ್ತರಿಸಲು ಸಾಧ್ಯವಿಲ್ಲ.

ಆ) ಉಚ್ಚ ನ್ಯಾಯಾಲಯವು ರಾಜ್ಯ ವಿಧಾನಮಂಡಲಕ್ಕೆ ಯಾವ ಮಾಹಿತಿಯನ್ನು ನೀಡಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ಆದುದರಿಂದ ಈ ಪ್ರಶ್ನೆಗೆ ಉತ್ತರಿಸಲು ಸಾಧ್ಯವಿಲ್ಲ.

ಈ) 4 ನ್ಯಾಯಾಧೀಶರ ಮತ್ತು ಎರಡು ಅಪರ ನ್ಯಾಯಾಧೀಶರ ಹುದ್ದೆಗಳು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಖಾಲಿ ಇವೆ.

ಉ) ರಾಜ್ಯದ ನ್ಯಾಯಾಧೀಶರುಗಳ ನೇಮಕಾತಿಯನ್ನು ಕೇಂದ್ರ ಸರ್ಕಾರ ಮಾಡಬೇಕಾಗಿರುವುದರಿಂದ ಈ ಬಗ್ಗೆ ಕೇಂದ್ರ ಸರ್ಕಾರದೊಂದಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ರಾಮಲಿಂಗಾ ರೆಡ್ಡಿ :- ಮಾನ್ಯ ಉಪಾಧ್ಯಕ್ಷಿಣಿಯವರೆ, ನನ್ನ ಪ್ರಶ್ನೆಯಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಡಿಸೆಂಬರ್ 1991ರ ಅಂತ್ಯದವರೆಗೆ ಎಷ್ಟು ಪ್ರಕರಣಗಳು ಬಾಕಿ ಇರುತ್ತವೆ? ಜನವರಿ 1991 ರಿಂದ ಡಿಸೆಂಬರ್ 1991ರ ಅಂತ್ಯದವರೆಗೆ ಎಷ್ಟು ಪ್ರಕರಣಗಳು ವಿಲೇವಾರಿಯಾಗಿರುತ್ತವೆ ಎಂದು ಕೇಳಿದ್ದೇನೆ. ಅದಕ್ಕೆ ಸರ್ಕಾರದವರು ಉಚ್ಚ ನ್ಯಾಯಾಲಯವು ರಾಜ್ಯ ವಿಧಾನಮಂಡಲಕ್ಕೆ ಯಾವ ಮಾಹಿತಿಯನ್ನು ನೀಡಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ, ಎಂದು ಉತ್ತರ ಕೊಟ್ಟಿದ್ದಾರೆ.

ಶ್ರೀ ಹೆಚ್.ಏಕಾಂತಯ್ಯ :- ಈ ಉತ್ತರದಿಂದ ತಮಗೆ ಸಮಾಧಾನವಾಗಿದೆಯೇ? ಉಚ್ಚ ನ್ಯಾಯಾಲಯದವರು ಕೊಟ್ಟಿರುವ ಉತ್ತರ ತಮಗೆ ಸಮಾಧಾನವಾಗಿದೆಯೇ ?

ಶ್ರೀ ಡಿ.ಬಿ.ಚಂದ್ರೇಗೌಡ :- ಉಚ್ಚ ನ್ಯಾಯಾಲಯವು ಮಾಹಿತಿಯನ್ನು ಕೊಡುವುದಕ್ಕೆ ತಯಾರಿಲ್ಲ ಎಂದು ಹೇಳಿದರೆ ನಿಮ್ಮ ಸರ್ಕಾರದ ಸ್ಥಿತಿ ಏನು ?

ಶ್ರೀ ಕೆ.ಹೆಚ್.ರಂಗನಾಥ್ :- ಸ್ಥಿತಿಯಲ್ಲ, ಅವರು ಹಾಗೆ ಹೇಳಬಾರದು.

ಶ್ರೀ ಡಿ.ಬಿ.ಚಂದ್ರೇಗೌಡ :- ಏಕೆ ?

ಶ್ರೀ ಕೆ.ಹೆಚ್.ರಂಗನಾಥ್ :- ಸ್ಥಿತಿ ಪ್ರಶ್ನೆ ಅಲ್ಲ. ಅವರು ಹಾಗೆ ಹೇಳಬಾರದು. ಹೈಕೋರ್ಟ್‌ನವರು ಮಾಹಿತಿಯನ್ನು ಕೊಡುವುದಿಲ್ಲ ಎಂದು ಹೇಳಬಾರದು. ಅವರು ಹಾಗೆ ಹೇಳಬಾರದು ಎಂದು ಹೇಳಿದೆ.

(ಗೊಂದಲ)

ಶ್ರೀ ಕೆ.ಹೆಚ್.ರಂಗನಾಥ್ :- ಈ ಸಭೆಯಲ್ಲಿ ಆಗುವುದನ್ನೆಲ್ಲಾ ಕೇಳಿಕೊಂಡು ಕುಳಿತುಕೊಳ್ಳುವುದಕ್ಕೆ ಅಲ್ಲ ಈ ಸಭೆ ಇರುವುದು.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ :- ಈ ರೀತಿ ಉತ್ತರ ಕೊಡುವುದು ಅಪಮಾನ ಅಲ್ಲವೇ ? ಅವರು ಕೊಟ್ಟಿದ್ದನ್ನು ಈ ರೀತಿ ಉತ್ತರ ಕೊಟ್ಟರೆ ನಮಗೆ ಇದೇ ಒಂದು ರೀತಿಯ ಅಪಮಾನವಾದ ಹಾಗೆ ಆಗುತ್ತದೆ.

(ಗೊಂದಲ)

ಶ್ರೀ ಹೆಚ್.ಏಕಾಂತಯ್ಯ :- ಸರ್ಕಾರದ ಉತ್ತರದಿಂದ ನಮಗೆ ಸಮಾಧಾನವಾಗಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ಇದು ನಿಜವಾಗಲೂ ಸರ್ಕಾರಕ್ಕೆ ಅಗೌರವವಾಗಿದೆ. ಸರ್ಕಾರ ಇದೆಯೋ ಅಥವಾ ಸರ್ಕಾರ ಇಲ್ಲವೋ ಗೊತ್ತಿಲ್ಲ.

(ಗೊಂದಲ)

ಉಪಾಧ್ಯಕ್ಷೆಯವರು:- ವಾಟಾಳ್ ನಾಗರಾಜ್‌ರವರೇ ಕುಳಿತುಕೊಳ್ಳಿ. ಅವರು ಏನು ಹೇಳುತ್ತಾರೆ ಕೇಳಿ.

ಶ್ರೀ ಹೆಚ್.ಏಕಾಂತಯ್ಯ:- ಅವರು ಹೇಳಬೇಕಾಗಿಲ್ಲ. It is already on record. ಈಗಾಗಲೇ ಅಪ್ರೂವಲ್ ಮಾಡಿದ್ದಾರೆ. ಅಪ್ರೂವಲ್ ಮಾಡಿದ್ದೇವೆಂದು ತಿಳಿಸಿದ್ದಾರೆ. ಈ ಉತ್ತರದಿಂದ ಸರ್ಕಾರಕ್ಕೆ ಏನಾದರೂ . . . . . .

ಶ್ರೀ ಎಂ.ವೀರಪ್ಪ ಮೊಯಿಲಿ:- ಕಳೆದ ಅಧಿವೇಶನದಲ್ಲಿ ವಿಧಾನ ಸಭಾ ಸದಸ್ಯರಾದಂತಹ ಶ್ರೀ ರಾಜೂಗೌಡರು ಪ್ರಶ್ನೆಯನ್ನು ಕೇಳಿದ್ದರು. ಅವರ ಪ್ರಶ್ನೆ 2300 ನ್ಯಾಯಾಲಯಗಳಲ್ಲಿ ಬಾಕಿ ಇರುವ ಮೊಕದ್ದಮೆಗಳ ಬಗ್ಗೆ ಕೇಳಿದ್ದರು.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಮುಂದೆ ನಾವು ಬೇರೆ ಪ್ರಶ್ನೆಗಳ ಬಗ್ಗೆ ಚರ್ಚೆ ಮಾಡುವುದಕ್ಕಿಂತ ಹೆಚ್ಚಾಗಿ, ಉಚ್ಚ ನ್ಯಾಯಾಲಯವು ರಾಜ್ಯ ವಿಧಾನಮಂಡಲಕ್ಕೆ ಯಾವ ಮಾಹಿತಿಯನ್ನು ನೀಡಲು ಸಾಧ್ಯವಿಲ್ಲವೆಂದು ಇದು ಈ ಸದನಕ್ಕೆ ಮಾಡಿರತಕ್ಕ ಅಪಮಾನ, ಅಗೌರವ, ಇದರ ಬಗ್ಗೆ ನೀವು ಏನು ತೀರ್ಮಾನವನ್ನು ತೆಗೆದುಕೊಂಡಿದ್ದೀರಿ.

ಉಪಾಧ್ಯಕ್ಷೆಯವರು:- ಅವರು ಹೇಳಲಿ, ಆಮೇಲೆ ಕೇಳಿ.

ಶ್ರೀ ಎಂ.ವೀರಪ್ಪ ಮೊಯಿಲಿ:- ಉತ್ತರ ಕೇಳಿ, ಬೇಕಾದರೆ ಆಮೇಲೆ ಕಾಮೆಂಟ್ ಮಾಡಿ. ಈ ಸದನಕ್ಕೆ ಅಧಿಕಾರ ಇದೆ ಅದನ್ನು ಮಾಡಿ. ಈಗ ಮಾನ್ಯ ರಾಜೂಗೌಡರು ಕೇಳಿದಂತಹ ಪ್ರಶ್ನೆಗೆ ಉತ್ತರಕೊಡಬೇಕೆಂದು ರಾಜ್ಯ ಸರ್ಕಾರ ಉಚ್ಚ ನ್ಯಾಯಾಲಯದ ರಿಜಿಸ್ಟ್ರಾರ್ ಜನರಲ್‌ರವರನ್ನು ಕೋರಿದಾಗ ಅವರು ದಿನಾಂಕ: 6-9-91 ರಂದು ಪುಟ 5 ರಲ್ಲಿ ಏನು ಉತ್ತರ ಕೊಟ್ಟಿದ್ದಾರೆ ಅದನ್ನು ಹೇಳುತ್ತೇನೆ. ಅವರು ಉತ್ತರ ಕೊಟ್ಟಿರುವುದನ್ನು ನಾವು ತಮ್ಮ ಮುಂದೆ ಹೇಳುತ್ತಿದ್ದೇವೆ. " ಉಚ್ಚನ್ಯಾಯಾಲಯವು ಕೇಂದ್ರ ಸರ್ಕಾರದ ಅಧೀನಕ್ಕೆ ಒಳಪಟ್ಟಿರುವುದರಿಂದ ರಾಜ್ಯ ವಿಧಾನಮಂಡಲಕ್ಕೆ ಯಾವ ಮಾಹಿತಿಯನ್ನೂ ಕೊಡಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ." ಉಚ್ಚ ನ್ಯಾಯಾಲಯವು ಕೇಂದ್ರ ಸರ್ಕಾರದ ಆಡಳಿತಕ್ಕೆ ಒಳಪಡುವುದರಿಂದ ಅದರ ಬಗ್ಗೆ ಲೋಕಸಭೆಯಲ್ಲಿ ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ವಿಧಾನಮಂಡಲದಲ್ಲಿ ಅಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಆದ್ದರಿಂದ ರಾಜ್ಯದ ಉಚ್ಚನ್ಯಾಯಾಲಯದಲ್ಲಿ ಬಾಕಿ ಉಳಿದಂತಹ ಪ್ರಕರಣಗಳ ಬಗ್ಗೆ ಮಾಹಿತಿ ಕೊಡಲಿಕ್ಕೆ ಆಗಲಿಲ್ಲ. ಇದು ಕೇಂದ್ರ ಸರ್ಕಾರದ ಆಡಳಿತಕ್ಕೆ ಒಳಪಡುವುದರಿಂದ ಮಾಹಿತಿ ಕೊಡಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ಆದ್ದರಿಂದ ಈ ಮಾಹಿತಿಯು ಎಷ್ಟರಮಟ್ಟಿಗೆ ಸಮಂಜಸವೋ ಅಲ್ಲವೋ ಎನ್ನುವುದರ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದಾಗ ನಾವು ಕೇಂದ್ರ ಸರ್ಕಾರಕ್ಕೆ ಮತ್ತು ಸಂಬಂಧಪಟ್ಟವರ ಹತ್ತಿರ ವ್ಯವಹರಿಸಬಹುದಾಗಿತ್ತು. ಅವರು ಉತ್ತರ ಕೊಟ್ಟಿದ್ದು ಸರಿಯೇ ಅಥವಾ ಅಲ್ಲವೇ ಎಂದು ಪ್ರತಿಕ್ರಿಯೆ ವ್ಯಕ್ತಪಡಿಸಬಹುದು. ಆದರೆ ಒಂದನ್ನು ಮಾತ್ರ ಮರೆಯಲಿಕ್ಕೆ ಸಾಧ್ಯವಾಗುವುದಿಲ್ಲ. ಉಚ್ಚನ್ಯಾಯಾಲಯದವರು ಈ ರೀತಿಯ ಉತ್ತರ ಕೊಟ್ಟಮೇಲೆ ಅದರ ಮೇಲೆ ನಾವು ಇವತ್ತು ವಿಧಾನ ಮಂಡಲದಲ್ಲಿ ಚರ್ಚೆ ಮಾಡುವುದರ ಬದಲು, ಈ ವಿಚಾರವನ್ನು ಸಂಬಂಧಪಟ್ಟವರ ಜೊತೆಯಲ್ಲಿ ಇಲ್ಲಿ ಮತ್ತು ಕೇಂದ್ರ ಸರ್ಕಾರದವರ ಜೊತೆಯಲ್ಲಿ ನಾವು ವ್ಯವಹರಿಸಿ ಅದಕ್ಕೆ ಸ್ಪಷ್ಟೀಕರಣ ಕೊಡೋಣ. ಏಕೆಂದರೆ ಇದು ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ವಿಷಯ. ಪ್ರಶ್ನೆ ಏನೆಂದರೆ, ಈಗ ಅವರು ಕೊಟ್ಟ ಉತ್ತರ ಎಷ್ಟು ಸಮಂಜಸವಾಗಿದೆ ಅಥವಾ ಇಲ್ಲ ಎನ್ನುವುದು ಒಂದು ವಿಚಾರ. ಎರಡನೆಯ ವಿಚಾರ ಏನೆಂದರೆ, ನಾವು ಇದನ್ನು ಅಲ್ಲಿ ವಿಚಾರಿಸೋಣ. ಏಕೆಂದರೆ ಇದು ರಾಜ್ಯದ ಮೊಕದ್ದಮೆಗಳಿಗೆ ಸಂಬಂಧಪಟ್ಟ ವಿಚಾರ, ಉಚ್ಚನ್ಯಾಯಾಲಯಗಳಲ್ಲಿ ಇರುವಾಗ ಆ ರಾಜ್ಯದ ಜನ ಇದರ ಬಗ್ಗೆ ವಿಚಾರವನ್ನು ತಿಳಿದುಕೊಳ್ಳಲಿಕ್ಕೆ ಹೆಚ್ಚು ಆಸಕ್ತಿಯಿಂದ ಇರುತ್ತಾರೆ. ಈ ದೃಷ್ಟಿಯಿಂದ ಬಹುಶ: ಮಾಹಿತಿ ಅಗತ್ಯವಾಗಿ ಬೇಕಾಗಿರುತ್ತದೆ. ಅದು ನಮ್ಮ ಅಭಿಪ್ರಾಯವೂ ಕೂಡ ಆಗಿದೆ. ಆದ್ದರಿಂದ, ನಾವು ಇದರ ಬಗ್ಗೆ

ಹೆಚ್ಚು ವ್ಯಾಖ್ಯಾನ ಮಾಡುವ ಬದಲು ಈ ವಿಚಾರವನ್ನು ಮೇಲ್ಮಟ್ಟದಲ್ಲಿ ತೆಗೆದುಕೊಳ್ಳುವುದು ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್:- ಇದು ಬಹಳ ಪ್ರಮುಖವಾದಂಥ ಪ್ರಶ್ನೆ. ಇದು ಸದನಕ್ಕೆ ಸಂಬಂಧಪಟ್ಟಿದ್ದು, ಸದನಕ್ಕೆ ಅಗೌರವ ತಂದಿರತಕ್ಕಂಥ ಪ್ರಶ್ನೆಯಾಗಿರುವುದರಿಂದ ಇದನ್ನು ಚರ್ಚೆ ಮಾಡಲೇಬೇಕಾಗುತ್ತದೆ.

(ಗೊಂದಲ)

ಶ್ರೀ ಕೆ.ಹೆಚ್.ರಂಗನಾಥ್:- ನಾನು ಮಾನ್ಯ ಮಂತ್ರಿಗಳಿಗೆ ಸಲಹೆ ಮಾಡುತ್ತಿದ್ದೇನೆ.

ಶ್ರೀ ಹೆಚ್.ಏಕಾಂತಯ್ಯ:- ಸಂಬಂಧಪಟ್ಟಂಥ ಉಚ್ಚ ನ್ಯಾಯಾಲಯಕ್ಕೆ, under Article 229 of the Constitution ನಮ್ಮ ರಾಜ್ಯದ ಸಾದಿಲ್ವಾರು ನಿಧಿಯಿಂದ ನಾವು ಹಣವನ್ನು ಖರ್ಚು ಮಾಡುತ್ತೇವೆ. ಹೀಗಿರುವಾಗ ಪಡೆಯುವುದಕ್ಕೆ ಅಧಿಕಾರ ಇಲ್ಲವೆ ? ಇಲ್ಲದಿದ್ದರೆ ಅದನ್ನು ನಿಲ್ಲಿಸಿಬಿಡಿ.

ಶ್ರೀ ಡಿ.ಬಿ.ಚಂದ್ರೇಗೌಡ: (ವಿರೋಧಪಕ್ಷದ ನಾಯಕರು):- ಮಾನ್ಯ ಉಪಾಧ್ಯಕ್ಷಿಣಿಯವರೆ, ಈಗ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ನೀವು ನಮ್ಮ ರಕ್ಷಣೆಗೆ ನಿಂತುಕೊಳ್ಳಬೇಕು. ತಾವು ನಿಲ್ಲುವುದಿಲ್ಲ. ಶಾಸಕಾಂಗ ಮತ್ತು ನ್ಯಾಯಾಂಗದ ಇತಿ ಮಿತಿಗಳನ್ನು 1967ರ ಸರ್ಚ್‌ಲೈಟ್ ಕೇಸ್‌ನಿಂದಲೂ ಚರ್ಚೆ ಮಾಡುತ್ತಾ ಬಂದಿದ್ದೇವೆ. ಇತ್ತೀಚೆಗೆ ಸರ್ವೋಚ್ಚ ನ್ಯಾಯಾಲಯ ತೀರ್ಮಾನ ಕೊಟ್ಟಿರತಕ್ಕಂಥ ಮಣಿಪುರಕ್ಕೆ ಸಂಬಂಧಪಟ್ಟಂಥ ಕೇಸ್ ಅನ್ನು ನೋಡಿದ್ದೇವೆ. ಅಲ್ಲಿಂದ ಇಲ್ಲಿಯವರೆಗೆ ನಡೆದುಬಂದಿರತಕ್ಕಂಥ ಒಟ್ಟು ವ್ಯವಹಾರ. ಅವರಿಗೆ ಬೇಕಾಗಿರತಕ್ಕಂಥ ಹಣಕಾಸಿನ ಬಗ್ಗೆ ನಾವು ಸದನದಲ್ಲಿ ವೋಟ್ ಮಾಡುತ್ತೇವೆ. ವೋಟ್ ಮಾಡಿ ಕಳುಹಿಸಿಕೊಡುತ್ತೇವೆ. ಅಂದರೆ, ಸರ್ವೋಚ್ಚ ನ್ಯಾಯಾಲಯ ಯಾವುದೇ ಇರಲಿ, ಈ ರಾಜ್ಯದ ಜನರಿಗೆ ಅವರು ಹಾಕತಕ್ಕಂಥ, ಅವರು ಕೊಡತಕ್ಕಂಥ, ನಾವು ಏನು ನ್ಯಾಯಾಲಯಕ್ಕೆ ದುಡ್ಡನ್ನು ಒದಗಿಸಿಕೊಡುತ್ತೇವೆ, ಅದರ ಬಗ್ಗೆ ಉತ್ತರ ಕೊಡಬೇಕೇ ? ಬೇಡವೇ? ಹಾಗಾದರೆ ಉತ್ತರ ಎಲ್ಲಿಂದ ಕೊಡಬೇಕು? ಈ ಸದನದ ಮೂಲಕವೇ ಕೊಡಬೇಕಾಗಿದೆ. ನಾವು ಚುನಾಯಿತ ಪ್ರತಿನಿಧಿಗಳಾಗಿ ಎಷ್ಟು ಕೇಸ್‌ಗಳು ಪೆಂಡಿಂಗ್ ಇವೆ. ಎಂದು ಕೇಳಿದರೆ ಅದರ ಮಾಹಿತಿಯನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆನ್ನುವ ಸ್ಥಿತಿಗೆ ಬಂದರೆ ಈ ಸದನದ ಸ್ಥಿತಿ ಏನು ? ರಾಜ್ಯಾಂಗದಲ್ಲಿ ನಾವು ಎಲ್ಲಿ ನಿಂತಿದ್ದೇವೆ. ಇದನ್ನು ನಾವು ಚರ್ಚೆ ಮಾಡಬೇಕಾಗುತ್ತದೆ. ಆದುದರಿಂದ ಇದು ಮುಖ್ಯವಾದ ವಿಷಯವಾಗಿರುವುದರಿಂದ ತಳ್ಳಿ ಹಾಕುವುದಕ್ಕಾಗುವುದಿಲ್ಲ. ಜೊತೆಗೆ ಇದರಲ್ಲಿ ನಮ್ಮಲ್ಲಿ ಕೂಡ ತಪ್ಪುಗಳಿದ್ದಾವೆ, ತಪ್ಪುಗಳು ಇಲ್ಲವೆಂದು ಹೇಳುವುದಿಲ್ಲ. ಆ ತಪ್ಪುಗಳು ಏನು ? ನಮಗೆ ಗೊತ್ತಿರುವ ಪ್ರಕಾರ ಹೈಕೋರ್ಟ್‌ನಲ್ಲಿ ಸಾಕಷ್ಟು ಕೇಸುಗಳು ಪೆಂಡಿಂಗ್ ಇವೆ. ಆದುದರಿಂದ ನ್ಯಾಯಾಧೀಶರು ನೇಮಕ ತ್ವರಿತವಾಗಿ ಆಗಬೇಕು. ಆದುದರಿಂದ, ನಾನು ನಿಮ್ಮಲ್ಲಿ ಪ್ರಶ್ನೆ ಮಾಡುತ್ತಿದ್ದೇನೆ. ಸರ್ಕಾರ ಇಂತಹ ವಿಚಾರದಲ್ಲಿ ಸದನವನ್ನು ಸಂಪೂರ್ಣವಾಗಿ ವಿಶ್ವಾಸಕ್ಕೆ ತೆಗೆದುಕೊಂಡು ಯಾವ ರೀತಿ ಇದು ಮುಂದುವರೆಯಬೇಕು ಎನ್ನತಕ್ಕಂಥಾದ್ದು ಇವೊತ್ತು ತೀರ್ಮಾನವಾಗಬೇಕು.

ಶ್ರೀ ಕೆ.ಹೆಚ್.ರಂಗನಾಥ್:- ನಮ್ಮ ಮತ್ತು ಕೇಂದ್ರದವರ ಸಂಬಂಧವಿರುವುದರಿಂದ ಮಾಹಿತಿ ಕೊಡುವುದಕ್ಕಾಗುವುದಿಲ್ಲ ಎನ್ನುವ ಮಾತನ್ನು ಹೈಕೋರ್ಟ್‌ನವರು ಹೇಳಿದ್ದಾರೆ. ಮತ್ತು ಇದರ ಬಗ್ಗೆ ಅವರ ಜೊತೆ ವ್ಯವಹರಿಸುತ್ತೇವೆ ಎನ್ನುವ ಮಾತನ್ನು ಕೂಡ ಹೇಳಿದ್ದಾರೆ. ಮಾನ್ಯ ರಿಜಿಸ್ಟ್ರಾರ್‌ರವರು ಬರೆದಂಥ ಪತ್ರವನ್ನು ಇವರು ಗಮನಕ್ಕೆ ತೆಗೆದುಕೊಂಡು, ಅದನ್ನು ಇಲ್ಲಿ ಹೇಳತಕ್ಕಂಥ ಒಂದು ಅಸಹಾಯಕತೆಯನ್ನು ಮಾನ್ಯ ಮಂತ್ರಿಗಳು ತೋರಿಸಬಾರದಾಗಿತ್ತು. ಎರಡನೆಯದಾಗಿ, ಅದು ಇತ್ಯರ್ಥವಾಗುವವರೆಗೆ ಹೈಕೋರ್ಟ್ ಜಡ್ಜ್‌ಗಳಿಗೆ ನಾವು ಏನು ಸಂಬಳ ಕೊಡುತ್ತಿದ್ದೇವೆ. ಅದನ್ನು ನಿಲ್ಲಿಸಿಬಿಡಿ. ಸಂಬಳ ಕೊಡಬೇಕಾದ್ದೇ ಇಲ್ಲ. ಏಕೆಂದರೆ, ಇಲ್ಲಿ ನಾವು ವೋಟ್ ಮಾಡುತ್ತೇವೆ. ಅಲ್ಲಿ ಅವರು ಈ ತರಹ ಎಲ್ಲಾ ಮಾತನಾಡುತ್ತಾರೆ.

Sri H.EKANTHAIAH: Article 229 Sub-Clause (3) says:

" The administrative expenses of a High Court, including all salaries,

allowances and pensions payable to or in respect of the officers and servants of the Court, shall be charged upon the Consolidated Fund of the State, and any fees or other moneys taken by the Court shall form part of that Fund." ಆಡಳಿತಾತ್ಮಕವಾದಂಥ ವೆಚ್ಚ ಎಲ್ಲವೂ ಸಹ ಈ ಸಾದಿಲ್ವಾರು ನಿಧಿಯಿಂದ ಕೊಡುತ್ತಿರುವುದರಿಂದ ಅವರ ಮೇಲೆ ನಮಗೆ ಯಾವುದೇ ಹಿಡಿತವಿಲ್ಲವೇ ? ನಾವೇನು ಇಲ್ಲಿ ಟೀಕೆ ಮಾಡುತ್ತಿದ್ದೇವೆಯೇ ? ಅವರು ಏನು ಮಾಡುತ್ತಿದ್ದಾರೆ ಎನ್ನುವುದನ್ನು ತಿಳಿದುಕೊಳ್ಳುವಷ್ಟು ಅಧಿಕಾರ ನಮಗಿಲ್ಲವೇ?

ಶ್ರಿ ಎಚ್.ಏಕಾಂತಯ್ಯ :- ಸರ್ಕಾರ ರಿಜಿಸ್ಟ್ರಾರ್‌ಗೆ ಪತ್ರ ಬರೆದಿದ್ದು, ಆ ಪತ್ರದಲ್ಲಿ ಏನು ನಮೂದು ಮಾಡಿದ್ದಾರೆ ? ನೀವು ಬರೆದಿರುವುದು ತಪ್ಪು. ನಾವು ಹಣವನ್ನು ಖರ್ಚು ಮಾಡುತ್ತೇವೆ. ಅದರ ಬಗ್ಗೆ ಈ ಸದನಕ್ಕೆ, ಸರ್ಕಾರಕ್ಕೆ ಲಂಕಿ-ಸಂಖ್ಯೆ ತೆಗೆದುಕೊಳ್ಳುವಂಥ ಅಧಿಕಾರ ಇಲ್ಲವೆ ? ಮತ್ತು ಏತಕ್ಕೋಸ್ಕರ ಅವರು ಹೈಕೋರ್ಟ್‌ನವರನ್ನು ಕೇಳಲಿಲ್ಲ ಮತ್ತು ಮಾಹಿತಿಯನ್ನು ತರಿಸಿಕೊಳ್ಳಲಿಲ್ಲ ಎಂಬುದರ ಬಗ್ಗೆ ವಿವರಣೆ ಬೇಕಾಗಿದೆ.

ಶ್ರಿ ಎಂ.ವಿ.ವೆಂಕಟಪ್ಪ :- ಮಾನ್ಯ ಉಪಾಧ್ಯಕ್ಷ್ಣಿಣಿಯವರೆ, ನಾನು ವಿಧಾನಪರಿಷತ್ತಿನಲ್ಲಿ ಸದಸ್ಯನಾಗಿದ್ದಾಗ ಅನೇಕಸಲ ಈ ರೀತಿಯ ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ಉತ್ತರಗಳನ್ನು ವಿಧಾನ ಪರಿಷತ್ತಿನಲ್ಲಿ ಸರ್ಕಾರದವರು ಕೊಟ್ಟಿದ್ದಾರೆ. ನಾನು ವಿಧಾನಸಭೆಯ ಸದಸ್ಯನಾದಮೇಲೂ ಕೂಡ ಉತ್ತರವನ್ನು ಕೊಟ್ಟಿದ್ದಾರೆ. ಇದು ಹೈಕೋರ್ಟ್‌ನವರು ಲೇಟೆಸ್ಟ್ ಆಗಿ ಉತ್ತರವನ್ನು ಕೊಡುತ್ತಿದ್ದಾರೆ. We are not going into the merits of each individual judgments of the High Court. ನಾವು ಅವರಿಗೆ ಹಣವನ್ನು ಸ್ಯಾಂಕ್ಷನ್ ಮಾಡುತ್ತಿರುವುದರಿಂದ, ಇದರ ಬಗ್ಗೆ ಎಷ್ಟು ಕೇಸ್ ಆಗಿದೆ, ನಮ್ಮ ಹತ್ತಿರ ಅನೇಕ ಜನರು ಬಂದು ನಮ್ಮ ಕೇಸ್ 4-5 ವರ್ಷಗಳಿಂದ 10 ವರ್ಷಗಳಿಂದ ಪೆಂಡಿಂಗ್ ಇದೆ ಎಂದು ಹೇಳುತ್ತಾರೆ. ನಾವು ಈ ಮಾಹಿತಿಯನ್ನು ತಿಳಿದುಕೊಳ್ಳಬೇಕು. ಅದಕ್ಕೋಸ್ಕರ ಅದು ತೀರ್ಮಾನ ಆಗುವವರೆಗೆ ಅವರಿಗೆ ಕೊಡತಕ್ಕ ಹಣವನ್ನು ನಿಲ್ಲಿಸಿ, ನಾವು ಏನು ಗ್ರಾಂಟ್‌ನ್ನು ಅವರಿಗೆ ಕೊಡುತ್ತೇವೆ ಅದನ್ನು ನಿಲ್ಲಿಸಿ.

ಶ್ರಿ ಬಿ.ಎಸ್.ಯಡಿಯೂರಪ್ಪ :- ಮಾನ್ಯ ಉಪಾಧ್ಯಕ್ಷ್ಣಿಣಿಯವರೆ, ತಮ್ಮ ಮೂಲಕ ಮಾನ್ಯ ಮಂತ್ರಿಗಳ ಗಮನ ಸೆಳೆಯಲು ಪ್ರಯತ್ನ ಮಾಡುತ್ತೇನೆ. ತಾವು ಕೊಟ್ಟಿರತಕ್ಕ ಉತ್ತರದ ಒರಿಜಿನಲ್ ದಾಖಲೆಗಳನ್ನು ಇಲ್ಲಿ ಪ್ರೊಡ್ಯೂಸ್ ಮಾಡಿ. ಸುಮಾರು 5-6 ವರ್ಷಗಳಿಂದ ನಾನು ಇಲ್ಲಿ ಕೆಲಸ ಮಾಡುತ್ತಿದ್ದೇನೆ. ಉಚ್ಚ ನ್ಯಾಯಾಲಯದ ಪ್ರಶ್ನೆಯನ್ನು ಕೇಳಿದಾಗ ಈ ರೀತಿಯ ಉತ್ತರವನ್ನು ಕೊಟ್ಟಂತಹ ಅನೇಕ ದಾಖಲೆಗಳು ನನ್ನ ಹತ್ತಿರ ಇದೆ. ಆದುದರಿಂದ ನೀವು ಏನು ಉತ್ತರವನ್ನು ಕೊಟ್ಟಿದ್ದೀರಿ ಅದು ಸರಿಯಲ್ಲ. ಉಚ್ಚನ್ಯಾಯಾಲಯವು ಉತ್ತರವನ್ನು ಕೊಟ್ಟಿದೆ ಎಂದು ಹೇಳುತ್ತಿದ್ದೀರಿ. ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದೀರಿ. ದಯಮಾಡಿ ಅದನ್ನು ಓದಿ, ಅದನ್ನು ಕೊಡಿ.

(ಗೊಂದಲ)

ಕೋರ್ಟಿನ ಬಗ್ಗೆ ಸರಿಯಾಗಿ ವರ್ತನೆ ಮಾಡಿದ್ದರೂ ಸಹ, ಸರ್ಕಾರಕ್ಕೆ ತಪ್ಪು ಮಾಹಿತಿಯನ್ನು ಕೊಡುವುದರಿಂದ ಜನರಲ್ಲಿ ತಪ್ಪು ಅಭಿಪ್ರಾಯ ಬರಬಹುದು. ದಯಮಾಡಿ ಅದರ ಒರಿಜಿನಲ್ ದಾಖಲೆಗಳನ್ನು ಉತ್ತರವೆಂದು ಹೇಳಿ ಏನು ಕೊಟ್ಟಿದ್ದೀರಿ ಅದನ್ನು ಓದಿ ಮತ್ತು ಅದನ್ನು ಸದನದ ಗಮನಕ್ಕೆ ತೆಗೆದುಕೊಂಡು ಬನ್ನಿ.

ಶ್ರಿ ವಾಟಾಳ್ ನಾಗರಾಜ್ :- ಮಾನ್ಯ ಉಪಾಧ್ಯಕ್ಷರೆ, ಇದೇ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಒಂದಕ್ಕೆ ಉತ್ತರವನ್ನು ಕೊಡುತ್ತಾರೆ, ಒಂದಕ್ಕೆ ಉತ್ತರವನ್ನು ಕೊಡುವುದಿಲ್ಲ. ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಯಾವುದಾದರೂ ನ್ಯಾಯಾಧೀಶರ ಹುದ್ದೆಗಳು ಖಾಲಿ ಇದೆಯೇ ಎಂದರೆ. ನಾಲ್ಕು ನ್ಯಾಯಾಧೀಶರ ಮತ್ತು ಎರಡು

ಅಪರ ನ್ಯಾಯಾಧೀಶರ ಹುದ್ದೆಗಳು ಕರ್ನಾಟಕದ ಉಚ್ಚನ್ಯಾಯಾಲಯದಲ್ಲಿ ಖಾಲಿ ಇವೆ ಎಂದು ಕೊಟ್ಟಿದ್ದಾರೆ. ಇದನ್ನು ಯಾರು ಕೊಟ್ಟಿದ್ದುದು ? ಇವರೇ ಕೊಟ್ಟರೆ ? ನ್ಯಾಯಾಲಯ ಕೊಟ್ಟಿತೆ ? ಒಂದು ಕೊಡುತ್ತದೆಂದು ಹೇಳುತ್ತಾರೆ ಇನ್ನೊಂದು ಕೊಡುವುದಿಲ್ಲವೆಂದು ಹೇಳುತ್ತಾರೆ. ಇದನ್ನು ಲಘುವಾಗಿ ತೆಗೆದುಕೊಳ್ಳುವುದಿಲ್ಲ. ಅಂತಿಮವಾಗಿ ಶಾಸನ ಸಭೆಗೆ ಮತ್ತು ಶಾಸಕಾಂಗಕ್ಕೂ ನ್ಯಾಯಾಲಯಕ್ಕೂ ಇಲ್ಲಿ ದೊಡ್ಡ ಅಂತರ ಬರುತ್ತದೆ, ಅದರ ಬಗ್ಗೆ ಸಭೆಯಲ್ಲಿ ಚರ್ಚೆ ಮಾಡತಕ್ಕ ಪರಿಸ್ಥಿತಿ ಒದಗಿಬರುತ್ತದೆ. ಇಷ್ಟು ಲಘುವಾಗಿ ಶಾಸನ ಸಭೆಯನ್ನು ಅವರು ಕಾಣತಕ್ಕದ್ದಲ್ಲ. ಈ ಉತ್ತರವನ್ನು ಸಭೆಯಲ್ಲಿ ಮಂಡಿಸುವುದಕ್ಕೆ ಮೊದಲು ಮಾನ್ಯ ಸಚಿವರು ಈ ವಿಚಾರವನ್ನು ಕೂಲಂಕಷವಾಗಿ ಚರ್ಚೆ ಮಾಡಿ, ತೀರ್ಮಾನ ಮಾಡಿ ಆಮೇಲೆ ಈ ಸಭೆಯಲ್ಲಿ ಅದನ್ನು ಇಡಬೇಕಾಗಿತ್ತು. ಆದರೆ ಅದನ್ನು ಬಿಟ್ಟು ಏಕಾಏಕಿ ಈ ಸಭೆಯಲ್ಲಿ ಇಟ್ಟಿದ್ದಾರೆ. ಆ ರಿಜಿಸ್ಟ್ರಾರ್ ಏನು ಪತ್ರವನ್ನು ಕೊಟ್ಟಿದ್ದಾರೆ ಅದನ್ನು ಇಲ್ಲಿ ಇಡಬೇಕು. ಇದರ ಬಗ್ಗೆ ಇಲ್ಲಿ ಚರ್ಚೆ ನಡೆಯಬೇಕು.

Sri M.V.VENKATAPPA:- Under what rule and Article they are refusing....

ಶ್ರೀ ಎಂ.ವೀರಪ್ಪ ಮೊಯಿಲಿ :- ಒಬ್ಬೊಬ್ಬರು ಒಂದೊಂದು ಪ್ರಶ್ನೆಯನ್ನು ಕೇಳಿದರೆ ಹೇಗೆ ಉತ್ತರವನ್ನು ಕೊಡುವುದಕ್ಕಾಗುತ್ತದೆ ?

ಉಪಾಧ್ಯಕ್ಷಿಣಿಯವರು :- ಮೊದಲು ಅವರು ಉತ್ತರವನ್ನು ಹೇಳುತ್ತಾರೆ ಆಮೇಲೆ ಪುನ: ಕೇಳುವಿರಂತೆ.

ಶ್ರೀ ಎಂ.ವೀರಪ್ಪ ಮೊಯಿಲಿ :- ಇದರಲ್ಲಿ ಕರ್ನಾಟಕದ ಉಚ್ಚ ನ್ಯಾಯಾಲಯದ ರಿಜಿಸ್ಟ್ರಾರ್‌ರವರು ಕರ್ನಾಟಕ ಸರ್ಕಾರದ ಚೀಫ್ ಸೆಕ್ರೆಟರಿಯವರಿಗೆ ಈ ರೀತಿ ಪತ್ರವನ್ನು ಬರೆದಿದ್ದಾರೆ. 'Number of cases pending in the High Court of Karnataka Starred L.A.Question tabled by ..ಏಕೆಂದರೆ ಅಸಹಾಯಕತೆ ಮತ್ತೊಂದು ಸಂಘರ್ಷದ ಪ್ರಶ್ನೆಯಲ್ಲ. ವಾಸ್ತವಿಕತೆಯನ್ನು ಈ ಸಭೆಯ ಮುಂದಿಡಬೇಕು. With reference to your letter No. DPAR....

ಶ್ರೀ ಕೆ.ಹೆಚ್.ರಂಗನಾಥ್ :- ಅಸಹಾಯಕತೆ ಇನ್ನತಕ್ಕದ್ದು ಮಂತ್ರಿಗಳಿಗೆ ಬರುತ್ತದೆ. He should have taken up the matter with the High Court. He should have taken up that with the Registrar, High Court of Karnataka....

Sri M.VEERAPPA MOILY:- The matter has already been taken up. This reply is not received from the Secretariat or the Law Department. . .

ಶ್ರೀ ಕೆ.ಹೆಚ್.ರಂಗನಾಥ್ :- ಅದಕ್ಕೋಸ್ಕರ ಅಸಹಾಯಕತೆ ಎಂದರೆ ಉದ್ದೇಶಪೂರ್ವಕವಾಗಿ ಬರೆದಿದ್ದಾರೆ.

Sri M.VEERAPPA MOILY:- We have got this reply from the High Court. It reads :, ಹೈಕೋರ್ಟಿನ ಜೊತೆಯಲ್ಲಿ ನಾವು ವ್ಯವಹಾರ ಮಾಡಿದ್ದೇವೆ. ಹೈಕೋರ್ಟ್‌ನವರು ಈ ರೀತಿಯ ಉತ್ತರವನ್ನು ಕೊಟ್ಟಿದ್ದಾರೆ. ಅವರು ಕೊಟ್ಟಿರತಕ್ಕ ಉತ್ತರ ಸಮಂಜಸವಾಗಿದೆಯೋ ಅಥವಾ ಇಲ್ಲವೋ ಅದು ಸದನಕ್ಕೆ ಮತ್ತು ಅವರಿಗೆ ಬಿಟ್ಟ ವಿಚಾರ. ನಾನು ಆ ಪತ್ರವನ್ನು ಓದಿ ಹೇಳುತ್ತೇನೆ.

(ಗೊಂದಲ)

ಉಪಾಧ್ಯಕ್ಷಿಣಿಯವರು:- ಅವರು ಪೂರ್ಣವಾಗಿ ಹೇಳಲಿ, ಆಮೇಲೆ ಏನಾದರು ವಿವರವಾಗಿ ಕೇಳುವಿರಂತೆ.

(ಗೊಂದಲ)

ಶ್ರೀ ಕೆ.ಹೆಚ್.ರಂಗನಾಥ್:- ಕೇಳೋದೇನಿದೆ ? ಇದು ಅಪ್ರೂವ್ ಆಗಿ ಸಭೆಗೆ ಬಂದುದರಿಂದ ಈ ರೀತಿಯ ಗೊಂದಲ ಉಂಟಾಯಿತು. He should have thought over it .....

ಶ್ರೀ ಎಂ.ವೀರಪ್ಪ ಮೊಯಿಲಿ :- ತಾವು ಸ್ವಲ್ಪ ಸಾವಧಾನ ಮತ್ತು ತಾಳ್ಮೆಯಿಂದ ಇರಬೇಕಾಗುತ್ತದೆ. ಏನು ಮಾಡುವುದು. I will read the letter. 'With reference to your letter No.DPAR 87 SHC 81 dated 27-8-1991 on the above subject, I am directed to inform that "no information relating to the High Court need be furnished to the State Legislature as the legislative power relating to the Constitution and organisation of the High Court is exclusively the Central Subject under Entries 78 of the VII the Schedule of the Constitution and therefore Section 11 of the Karnataka High Court Act, 1961 to the extent it is inconsistent with the Constitutional provisions cannot prevail'. . . .

ಶ್ರೀ ವಾಟಾಳ್ ನಾಗರಾಜ್ :- ಇದು ಸದನದ ಹಕ್ಕು ಚ್ಯುತಿಯಾಗುತ್ತದೆ.

(ಗೊಂದಲ)

ಶ್ರೀ ಎಂ.ವೀರಪ್ಪ ಮೊಯಿಲಿ :- ತಾವು ದಯವಿಟ್ಟು ಉತ್ತರವನ್ನು ಪೂರ್ತಿಗೊಳಿಸುವುದಕ್ಕೆ ರಕ್ಷಣೆ ಕೊಡಬೇಕು. ಏಕೆಂದರೆ ಆಗಾಗ್ಗೆ ಎದ್ದು ನಿಂತು ಮಾತನಾಡಿದರೆ ಸದನದಲ್ಲಿ ಉತ್ತರವನ್ನು ಹೇಗೆ ಕೊಡುವುದು? ಏಕೆ ಈ ಪ್ರವೃತ್ತಿ ಬೆಳೆದಿದೆಯೋ ನನಗಂತೂ ಅರ್ಥವಾಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ :-ಈ ಪ್ರವೃತ್ತಿಗೆ ಕಾರಣ ಏನು ಗೊತ್ತೆ ? ತಾವು ಇಟ್ಟಿದ್ದಕೋಸ್ಕರ ಈ ಸದನದಲ್ಲಿ ನೀವು ಮೊದಲೇ ಈ ಪ್ರಶ್ನೆಯನ್ನು ತಡೆ ಹಿಡಿದಿದ್ದರೆ ಈ ಪ್ರವೃತ್ತಿ ಬೆಳೆಯುತ್ತಿರಲಿಲ್ಲ.

(ಗೊಂದಲ)

ಶ್ರೀ ಬಿ.ಹೆಚ್.ಬನ್ನಿಕೋಡ್ :- ಸರ್ಕಾರದ ಇಂತಹ ಉತ್ತರಗಳಿಂದ ಉದ್ಭವಿಸುತ್ತಿದೆ ಅಷ್ಟೇ.

ಶ್ರೀ ಡಿ.ಬಿ.ಚಂದ್ರೇಗೌಡ :- ಸಂಸದೀಯ ವ್ಯವಹಾರಗಳ ಮಂತ್ರಿಗಳನ್ನು ಪ್ರಶ್ನೆ ಮಾಡುವುದು ಬೇರೆ, ವೀರಪ್ಪಮೊಯಿಲಿಯವರು ಈ ಸದನದ ಸದಸ್ಯರಾಗಿ ಈ ಉತ್ತರದಿಂದ ನಿಮಗೆ ತೃಪ್ತಿಯಾಗುವ ಹಾಗೆ ಇದ್ದರೆ ಸರಿ, ಅವರಿಗೆ ತೃಪ್ತಿ ಆಗುವುದಿಲ್ಲವೆಂದು ಆದರೆ ಆಗ ಸರ್ಕಾರ ಏನು ಆಲೋಚನೆ ಮಾಡಿದೆ? ಒಂದು ವೇಳೆ ಹಾಗೆ ಆಲೋಚನೆಮಾಡುವುದಕ್ಕೆ ನಿಮಗೆಸಾಧ್ಯವಿಲ್ಲದಿದ್ದರೆ ಈ ಸಭೆಯಲ್ಲಿ ಇಂಥದ್ದನ್ನು ಗಂಭೀರವಾಗಿ ಗಮನಿಸಿರುವುದನ್ನು ಉಚ್ಚ ನ್ಯಾಯಾಲಯದ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ.ವೀರಪ್ಪ ಮೊಯಿಲಿ :- ಅದಕ್ಕೆ ಸಾವಧಾನವಾಗಿ ಪರಿಹಾರ ಹುಡುಕಬೇಕಾಗುತ್ತದೆ. ಪ್ರಶ್ನೆ ಅನೇಕ ಸಂದರ್ಭದಲ್ಲಿ ಈ ವಿವರಗಳನ್ನು ಕೇಳಿದಾಗ ಉಚ್ಚ ನ್ಯಾಯಾಲಯ ವಿವರಗಳನ್ನು ಒದಗಿಸಿದಂತಹ ಸಂದರ್ಭ ಕೂಡ ಇದೆ. On earlier occasion---- ಒದಗಿಸಿದಂತಹ ಸಂದರ್ಭ ಕೂಡ ಇದೆ, ಏಕೆಂದರೆ ಈ ಸದನದ ಸದಸ್ಯರ ಹಕ್ಕಿನ ಪ್ರಶ್ನೆ ಕೂಡ ಇದೆ, ನಾನು ಓದುತ್ತೇನೆ, ಏಕೆಂದರೆ, Article 78 -- entry 65 --ಏನು ಮಾಡಿದ್ದಾರೆಂದರೆ let me complete ....

(ಗೊಂದಲ)

ಉಪಾಧ್ಯಕ್ಷೆಯವರು :- ಅವರು ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಎಂ.ವೀರಪ್ಪ ಮೊಯಿಲಿ :- ಅವಸರವೇನೂ ಇಲ್ಲ, ನಾನು ಹೇಳುತ್ತಿದ್ದೇನೆ, ತಾವು ವೇಯ್ಟ್

ಮಾಡಬಹುದು.

ಶ್ರೀ ಹೆಚ್.ಏಕಾಂತಯ್ಯ:- ಅವಸರವೇನೂ ಇಲ್ಲ,ನಾನು ಹೇಳುತ್ತಿರುವುದು78 ನಲ್ಲಿ ಇಲ್ಲ, ಅದಕ್ಕೋಸ್ಕರ ನಾನು ನಿಮ್ಮ ಗಮನಕ್ಕೆ ತಂದೆ.

Sri M. VEERAPPA MOILY :- Please read the Registrar's letter ಇದು ನನ್ನ ಲೆಟರ್ ಅಲ್ಲ, ಸರ್ಕಾರದ ಲೆಟರ್ ಅಲ್ಲ, ನಾನು ಏನು ರಿಜಿಸ್ಟ್ರಾರ್ ಬರೆದಿದ್ದಾರೆ, ಇದನ್ನು ಸದನದ ಗಮನಕ್ಕೆ ತಂದಿದ್ದೇನೆ. ಈಗ ಆರ್ಟಿಕಲ್ 78 ಅನ್ನು ತಾವು ಹೇಳುವುದಿದ್ದರೆ ನನ್ನ ಸಹಮತವಿದೆ. Article 78 of Seventh Schedule of the Constitution says;

> Constitution and organisation (including vacations) of the High Courts except provisions as to officers and servants of High Courts ; persons entitled to practice before the High Courts.

In State list item 65 it says :

> Jurisdiction and powers of all courts, except the Supreme Court, with respect to any of the matters in this List.....

Therefore .... ಮಾನ್ಯ ಅಧ್ಯಕ್ಷಿಣಿಯವರೇ, ಅನೇಕ ಸಂದರ್ಭಗಳಲ್ಲಿ ಮಾಹಿತಿಗಳನ್ನು ಒದಗಿಸಿದ್ದುದು ಇದೆ. ಆದರೆ ಈ ಆರ್ಟಿಕಲ್, ಸೆಂಟ್ರಲ್ ಲಿಸ್ಟ್‌ನಲ್ಲಿದೆ ಉಚ್ಚನ್ಯಾಯಾಲಯಕ್ಕೆ ಸಂಬಂಧಪಟ್ಟಂತೆ ಸ್ಟೇಟ್ ಲಿಸ್ಟ್‌ನಲ್ಲಿ ಕೂಡ ಕೆಲವು ಪವರ್‌ಗಳು ಇವೆ. ವಿರೋಧ ಪಕ್ಷದ ನಾಯಕರು ಪ್ರಶ್ನೆಯನ್ನು ಏನು ಕೇಳಿದ್ದಾರೆ, ತಮ್ಮ ಜೊತೆಯಲ್ಲಿ ಅದಕ್ಕೆ ನನ್ನ ಸಹಮತವಿದೆ. ಏಕೆಂದರೆ ರಾಜ್ಯಕ್ಕೆ ಸಂಬಂಧಪಟ್ಟಂತ ಮಾಹಿತಿಗಳನ್ನು ಪಡೆಯುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇದೆ, ಸರ್ಕಾರದ ಅಭಿಪ್ರಾಯದ ಪ್ರಕಾರ ಇದನ್ನು ಕೇಂದ್ರ ಸರ್ಕಾರ ಮಾತ್ರ ಉಚ್ಚ ನ್ಯಾಯಾಲಯದಲ್ಲಿ ಮತ್ತು ಭಾರತ ಸರ್ಕಾರದ ಸರ್ವಶ್ರೇಷ್ಠ ನ್ಯಾಯಾಲಯದ ಜೊತೆಯಲ್ಲಿ ಕೂಡ ವ್ಯವಹಾರ ನಡೆಸಿ, ಮಾಹಿತಿಯನ್ನು ಕೊಡತಕ್ಕಂತ ಈ ಸದನದ ಹಕ್ಕು ನಮ್ಮ ಅಭಿಪ್ರಾಯದ ಪ್ರಕಾರ ನನಗನಿಸುತ್ತದೆ ನಮ್ಮ ಪ್ರಕಾರ ಈ ಮಾಹಿತಿಗಳನ್ನು ಪಡೆಯುವ ಹಕ್ಕು ಮತ್ತು ಅಧಿಕಾರ, ನಮ್ಮ ಸರ್ಕಾರಕ್ಕೆ ಇದೆ.

Sri M. VEERAPPA MOILY :- This we need not express. ಕಾನೂನು ಪ್ರಕಾರ, ಸಂವಿಧಾನದ ಪ್ರಕಾರ ನಮಗೆ ಹಕ್ಕಿದೆ. ನಾವು ಉಚ್ಚ ನ್ಯಾಯಾಲಯಕ್ಕೆ ಇದನ್ನು ಪುನ: ಪರಿಗಣಿಸಬೇಕೆಂದು . . . . . .

ಶ್ರೀ ಬಿ.ಹೆಚ್.ಬನ್ನಿಕೋಡ್ :- ಆ ಹಕ್ಕನ್ನು ಚಲಾಯಿಸಿ ಸದನಕ್ಕೆ ಸರಿಯಾಗ ಉತ್ತರವನ್ನು ಕೊಡಬೇಕಾಗಿತ್ತು.

(ಗೊಂದಲ)

ಶ್ರೀ ಎಂ.ವೀರಪ್ಪ ಮೊಯಿಲಿ:- ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ಮಾಹಿತಿಯನ್ನು ಸರ್ಕಾರ ಪಡೆದು ವಿಧಾನ ಮಂಡಲಕ್ಕೆ ಒದಗಿಸತಕ್ಕ ವ್ಯವಸ್ಥೆ ಮಾಡುವುದು. ಕರ್ನಾಟಕ ವಿಧಾನ ಮಂಡಲಕ್ಕೆ ಹಕ್ಕು ಇದ್ದ ಕಾರಣದಿಂದಲೇ ನಾವು ಉಚ್ಚ ನ್ಯಾಯಾಲಯದಿಂದ ಮಾಹಿತಿ ಕೇಳಿದ್ದೇವೆ. We have demanded that information only after we are convince. This House is entitled to know the information on this particular question .... ಆದ್ದರಿಂದ ನಾವು ಪುನ: ಸಮಾಲೋಚನೆಯನ್ನು ಮಾಡುತ್ತೇವೆ, ಉಚ್ಚ ನ್ಯಾಯಾಲಯದ ಜೊತೆ ಮಾತನಾಡುತ್ತೇವೆ. ಮಾನ್ಯ

ಮುಖ್ಯಮಂತ್ರಿಗಳು ನಾವು ಸಮಾಲೋಚನೆ ಮಾಡಿಕೊಂಡು ಸದನಕ್ಕೆ ತಿಳಿಸುತ್ತೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ಸದನಕ್ಕೆ ಅಗೌರವ ಮಾಡಿದ್ದಾರೆ. ಸಮಾಲೋಚನೆ ಅಂದರೆ ಸರಿಯಲ್ಲ, ನೇರವಾಗಿ ನಾವು ಉಚ್ಚ ನ್ಯಾಯಾಲಯದ ಮೇಲೆ ತೀವ್ರವಾಗಿ ಕ್ರಮ ಕೈಗೊಳ್ಳಬೇಕಾಗುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ :-ಇದು ಸರ್ಕಾರದ ತಪ್ಪು. ಮಿಸ್ಟೇಕ್ ಆಗಿದ್ದರೆ, ತಪ್ಪುಗಳು ಆಗಿದ್ದರೆ ಉಚ್ಚ ನ್ಯಾಯಾಲಯಕ್ಕೆ ಬರೆದು ಉತ್ತರ ತರಿಸಿಕೊಡಬೇಕಾಗಿತ್ತು.

(ಗೊಂದಲ)

ಶ್ರೀ ಸಿ.ಬೈರೇಗೌಡ:- ಸನ್ಮಾನ್ಯ ಉಪಾಧ್ಯಕ್ಷೀಣಿಯವರೆ, ನಾನು ತಮ್ಮ ಪರವಾನಿಗೆಯನ್ನು ಆಗಿಂದಲೂ ಪಡೆಯಬೇಕೆಂದು ಕೇಳುತ್ತಿದ್ದೇನೆ. ತಾವು ದಯವಿಟ್ಟು ನನಗೆ ಅವಕಾಶವನ್ನು ಮಾಡಿಕೊಡಬೇಕು. ಮಾನ್ಯಮಂತ್ರಿಗಳು ಓದಿದ ಹೈಕೋರ್ಟಿನ ರಿಜಿಸ್ಟ್ರಾರ್‌ರವರ ಪತ್ರದಲ್ಲಿ ' no imformation could be furnished'.. ಎನ್ನತಕ್ಕಂಥ ಪದವನ್ನು ಹೇಳಿದ್ದಾರೆ. ಈಗ ನಾವು ಪುನ: ಕೂಡ ಅವರ ಹತ್ತಿರ ಸಮಾಲೋಚನೆ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ:- ಸನ್ಮಾನ್ಯ ಸಭಾಧ್ಯಕ್ಷೀಣಿಯವರೆ, ಸಿ.ಬೈರೇಗೌಡರು ಮಾತನಾಡುತ್ತಿದ್ದರೆ, ಒಬ್ಬರು ದಾಂಧಲೆ ಮಾಡುತ್ತಿದ್ದಾರೆ, ಇನ್ನೊಬ್ಬರು ಇನ್ನೊಂದು ರೀತಿ ಹೇಳುತ್ತಿದ್ದಾರೆ.

ಉಪಾಧ್ಯಕ್ಷೀಣಿಯವರು :- 4-4 ಜನ ಈ ತರಹ ನಿಂತುಕೊಂಡು ಮಾತನಾಡಿದರೆ ಅವರು ಹೇಗೆ ಆದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ ಇದೆ, ದಯವಿಟ್ಟು ಎಲ್ಲರೂ ಕೋ ಆಪರೇಟ್ ಮಾಡಬೇಕು.

(ಗೊಂದಲ)

ಶ್ರೀ ಸಿ.ಬೈರೇಗೌಡ :- ಸನ್ಮಾನ್ಯ ಉಪಾಧ್ಯಕ್ಷೀಣಿಯವರೆ, ತಾವು ನನಗೆ ಅವಕಾಶ ಕೊಟ್ಟ ಮೇಲೆ ನಾನು ಮಾತನಾಡುತ್ತಿದ್ದೇನೆ. ಆದಕ್ಕೆ ಮೊದಲು ನಾನು ಮಾತನಾಡಲಿಲ್ಲ.

ಉಪಾಧ್ಯಕ್ಷೀಣಿಯವರು :- ತಾವು ಮಾತನಾಡಿ ಬೇರೆ ಯಾರೂ ಮಾತನಾಡುವುದು ಬೇಡ.

ಶ್ರೀ ಸಿ.ಬೈರೇಗೌಡ :- ಈಗ ಮಾನ್ಯ ಮಂತ್ರಿಗಳು ಹೈಕೋರ್ಟ್‌ನವರು ಬರೆದ ಪತ್ರದಲ್ಲಿ " no information could be furnished" ಎನ್ನುವ ಪದವನ್ನು ಓದಿದ್ದಾರೆ. ಅವರು ಹೈಕೋರ್ಟ್ ಜೊತೆ ಅಥವಾ ಹೈಕೋರ್ಟ್ ರಿಜಿಸ್ಟ್ರಾರ್‌ರವರ ಜೊತೆ ಸಮಾಲೋಚನೆ ಸಹ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಆದರೆ, ಈ ಹೈಕೋರ್ಟ್‌ನಲ್ಲಿ ಖರ್ಚಾಗತಕ್ಕಂಥ ಪ್ರತಿಯೊಂದು ಪೈಸೆಯೂ ಕೂಡ ನಾವು ಇಲ್ಲಿ ಓಟು ಮಾಡಿದರೆ, ನಾವು ಇಲ್ಲಿ ಮಂಜೂರು ಮಾಡಿದರೆ ಅಲ್ಲಿ ಖರ್ಚಾಗುತ್ತದೆ, ಇಲ್ಲದಿದ್ದರೆ ಇಲ್ಲ. ಈ ಪರಿಸ್ಥಿತಿ ಇರುವಾಗ ಅಲ್ಲಿ ಏನು ಕೆಲಸ ನಡೆಯುತ್ತಿದೆ , ಏನು ಆಗುತ್ತಿದೆ, ಏನು ಹೋಗುತ್ತಿದೆ ಎನ್ನುವುದನ್ನು ಈ ಸದನ ಮತ್ತು ರಾಜ್ಯದ ಜನತೆ ತಿಳಿದುಕೊಳ್ಳಬೇಕಾದುದು ಅವಶ್ಯಕತೆ ಇದೆ. ಆದ್ದರಿಂದ ಏನು ಸಮಾಲೋಚನೆ ಮಾಡಬೇಕು ಎಂದು ಹೇಳುತ್ತೀರಿ, ಅಲ್ಲಿಯವರೆಗೂ ಕೂಡ ನಾವು ಅವರಿಗೆ ಒಂದು ಪೈಸೆಯನ್ನು ಕೊಡುವುದು ಬೇಡ. No information could be furnished ಅಂದರೆ No paise could be given to them. Why should you give money for them. It is settled. Will the Government has the will to that extent ?

ಶ್ರೀ ಹೆಚ್. ಏಕಾಂತಯ್ಯ:- ಸನ್ಮಾನ್ಯ ಸಭಾಧ್ಯಕ್ಷೀಣಿಯವರೆ, ಮಾನ್ಯ ಸಚಿವರು ಎರಡು ಮುಖ್ಯವಾದಂತಹ ಪ್ರಶ್ನೆಗಳಿಗೆ ಉತ್ತರವನ್ನು ಕೊಡಲಿಲ್ಲ ಮತ್ತು ವಿವರಣೆಯನ್ನು ಕೊಡಲಿಲ್ಲ. ಮೊದಲನೆಯದಾಗಿ ಸಾದಿಲ್ವಾರು ನಿಧಿಯಿಂದ ನಾವು ಆಡಳಿತಾತ್ಮಕ ವೆಚ್ಚವನ್ನು ಹೈಕೋರ್ಟ್‌ಗೆ ಮಾಡುತ್ತೇವೆ ಮತ್ತು ಸೆಂಟ್ರಲ್ ಲಿಸ್ಟ್ ನಂ. 10ನೇ

ಷೆಡ್ಯೂಲ್ ಪ್ರಕಾರ ಕಾನ್ಸ್ಟಿಟ್ಯೂಷನ್ ಅಂಡ್ ಆರ್ಗನೈಜೈಷನ್ ಆಫ್ ದಿ ಹೈಕೋರ್ಟ್ ಈ information does not relates to this entry. ಮಾನ್ಯ ವೀರಪ್ಪ ಮೊಯಿಲಿಯವರು ಈ ಕಡೆ ಗಮನ ಹರಿಸಬೇಕು. ಅವರು ಹೇಳಿದಂತಹ 78ನೇ ಲಿಸ್ಟ್ ಏನು ಇದೆ ಅದರಲ್ಲಿ it only relates to constitution and organisation of the High Courts but does not relate to the information required by this House. . . . ಈಗ ರಿಜಿಸ್ಟ್ರಾರ್‌ರವರು ಪತ್ರವನ್ನು ಬರೆದಿದ್ದಾರೆಂದು ತಾವು ಹೇಳಿದ್ದೀರಿ. ರಿಜಿಸ್ಟ್ರಾರ್‌ರವರ ಪತ್ರ ಈ ಆಧಾರದಮೇಲೆ ಇದೆಯೆ ? ಹಾಗಿದ್ದರೆ ಅವರು ನೀಡಿದಂಥ ಇಂಟರ್ ಪ್ರಿಟೇಷನ್‌ನ್ನು ತಾವು ಒಪ್ಪಿದ್ದೀರಾ ? ಒಪ್ಪಿಲ್ಲದಿದ್ದರೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ? ಇವತ್ತು ನಾನು ಕೇಳುತ್ತಿಲ್ಲ. ಯಾವಾಗ ರಿಜಿಸ್ಟ್ರಾರ್‌ರವರಿಂದ ತಮಗೆ ಉತ್ತರ ಬಂತೋ ಆ ಕೂಡಲೇ ತಾವು ಪ್ರತಿಕ್ರಿಯೆಯನ್ನು ಮಾಡಿದ್ದೀರಾ ? ಇದಕ್ಕಿಂತ ಮೊದಲು ನಾನು ತಮ್ಮನ್ನು ಕೇಳುತ್ತಿದ್ದೇನೆ, ಮಾನ್ಯ ಮಂತ್ರಿಗಳು ಈ ಉತ್ತರವನ್ನು ಪ್ರೂವ್ ಮಾಡಿದ್ದಾರೆಯೇ ? ಅದರ ಅರ್ಥ ಏನೆಂದರೆ, ಸರ್ಕಾರ ಅವರ ವಾದವನ್ನು ಒಪ್ಪಿಕೊಂಡಿದೆ ಎಂದು. ಇಲ್ಲದಿದ್ದರೆ ಇವರು ಈ ಉತ್ತರವನ್ನು ಹೇಳಬೇಕಾಗಿರಲಿಲ್ಲ. ಅದಕ್ಕೆ ಬದಲಾಗಿ ಸರ್ಕಾರ ಇದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಇದರ ಬಗ್ಗೆ ಸಮಾಲೋಚನೆ ಮಾಡಿ ಸಂಬಂಧಪಟ್ಟವರಿಗೆ ಪತ್ರವನ್ನು ಬರೆದು ತದನಂತರ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಬಹುದಿತ್ತು. ಆ ರೀತಿ ಹೇಳದೇ ಇರುವುದರಿಂದ ಮತ್ತು ಈ ಉತ್ತರವನ್ನು ಈಗಾಗಲೇ ಸಂಬಂಧಪಟ್ಟ ಮಂತ್ರಿಗಳು ಅಪ್ರೂವ್ ಮಾಡಿರುವುದರಿಂದ ಇದು ಸರ್ಕಾರದ ಒಂದು ನೀತಿಯಾಗಿದೆ ಎಂಬುದನ್ನು ತಿಳಿದುಕೊಂಡರೆ ಇದರಲ್ಲಿ ಏನೂ ತಪ್ಪಿಲ್ಲ. ಆದುದರಿಂದ 1978ನೇ ಆಕ್ಟ್ ಏನಿದೆ ಅದರ ಪ್ರಕಾರ ಅವರು ಯಾವುದೇ ಒಂದು ಇನ್‌ಫರ್‌ಮೇಷನ್‌ನ್ನೂ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೈಕೋರ್ಟ್‌ನವರು ಹೇಳುವುದಕ್ಕೆ ಅವರಿಗೆ ಅಧಿಕಾರವೇ ಇಲ್ಲ. ಎಂಟ್ರಿಸ್ 65, ಏನು ಸೆಕೆಂಡ್ ಲಿಸ್ಟ್ ಇದೆ ಅದರ ಪ್ರಕಾರ ಸರ್ಕಾರಕ್ಕೆ ಈ ಅಧಿಕಾರ ಇದೆ. ಇದನ್ನು ಪಡೆದುಕೊಳ್ಳುವುದಕ್ಕೆ ಸರ್ಕಾರ ಮನಸ್ಸು ಮಾಡಬೇಕಾಗಿತ್ತು. ಮತ್ತು ಎಲ್ಲಿಯವರೆಗೆ ಅವರು ಈ ಮಾಹಿತಿಯನ್ನು ಕೊಡುವುದಿಲ್ಲವೋ ಅಲ್ಲಿಯವರೆಗೂ ಕೂಡ ನಾವು ಕನ್‌ಸಾಲಿಡೇಟೆಡ್ ಫಂಡ್ ಆಫ್ ಸ್ಟೇಟ್ ಅಂದರೆ ರಾಜ್ಯದ ಸಾದಿಲ್ವಾರು ಫಂಡ್‌ನಿಂದ ಹಣವನ್ನು ಕೊಡುವುದಿಲ್ಲವೆಂದು ಹೇಳುವುದಕ್ಕೆ ಸರ್ಕಾರ ಸಿದ್ಧವಾಗಿದೆಯೆ ?

ಇನ್ನು ಸರ್ಕಾರದವರು ಕೇಳಿರತಕ್ಕಂಥ ಮಾಹಿತಿಯನ್ನು, ಉತ್ತರವನ್ನು ಹೈಕೋರ್ಟ್‌ನವರು ಕೊಟ್ಟಿದ್ದಾರೋ, ಇಲ್ಲವೋ ? ಕೊಟ್ಟಿದ್ದರೆ ಅದಕ್ಕೆ ಹೈಕೋರ್ಟ್‌ನವರು ಏನು ಹೇಳಿದ್ದಾರೆ ? ಅದನ್ನು ಈ ಸದನದ ಮುಂದಿಡಬೇಕೆಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವೀರಪ್ಪ ಮೊಯಿಲಿ :- ಮಾನ್ಯ ಉಪಾಧ್ಯಕ್ಷೆಣಿಯವರೆ, ಈಗಾಗಲೇ ನಾನು ಉತ್ತರವನ್ನು ಕೊಟ್ಟಿದ್ದೇನೆ. ಆರ್ಟಿಕಲ್ ಎಂಟ್ರಿ 78 ಸೆಂಟ್ರಲ್ ಲಿಸ್ಟ್ ಏನಿದೆ ಅದರ ಪ್ರಕಾರ ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿದ್ದು, ನಾವು ಸ್ಟೇಟ್ ಲೆಜಿಸ್ಲೇಚರ್‌ಗೆ ಕೊಡತಕ್ಕದ್ದಲ್ಲ ಎಂದು ಹೇಳಿದ್ದಾರೆ. ಅಂದರೆ ಸ್ಟೇಟ್ ಲಿಸ್ಟ್‌ನಲ್ಲಿ ಎಂಟ್ರಿ 65ರಲ್ಲಿ ಸುಪ್ರೀಂ ಕೋರ್ಟ್ ಹೊರತಾಗಿ ರಾಷ್ಟ್ರದಲ್ಲಿರತಕ್ಕ ಕೋರ್ಟ್‌ಗಳು ಏನಿವೆ ಅವುಗಳ ಬಗ್ಗೆ ಮಾಹಿತಿಯನ್ನು ಸಂಗ್ರಹ ಮಾಡತಕ್ಕ ಅಧಿಕಾರ ಈ ವಿಧಾನಮಂಡಲಕ್ಕೆ ಇದೆ. ರಾಜ್ಯ ಸರ್ಕಾರಕ್ಕೆ ಇದೆ. ಇದು ಸರ್ಕಾರದ ಸ್ಪಷ್ಟವಾದ ಧೋರಣೆ. ಆದುದರಿಂದ ಇದಕ್ಕೆ ಸಂಬಂಧಪಟ್ಟಂತೆ ರಾಜ್ಯದ ಉಚ್ಚನ್ಯಾಯಾಲಯದವರಿಗೆ ಪುನ: ನಾವು ಬರೆದು ಈ ಮಾಹಿತಿಯನ್ನು ತರಿಸುತ್ತೇವೆ. ಇದು ಜ್ಯುಡಿಷಿಯರಿಗೆ ಸಂಬಂಧಪಟ್ಟ ವಿಚಾರವಾಗಿರುವುದರಿಂದ ಬಹುಶ: ನಾವು ಇದರ ಬಗ್ಗೆ ಸಂಘರ್ಷಣೆಯ ದಾರಿಯನ್ನು ಹಿಡಿಯುವುದರ ಬದಲು ಇದಕ್ಕೆ ಕಾನೂನುಬದ್ಧವಾದ, ಸಂವಿಧಾನಬದ್ಧವಾದ ಒಂದು ದಾರಿಯನ್ನು ಹಿಡಿದು ಉಚ್ಚ ನ್ಯಾಯಾಲಯದಿಂದ ನಾವು ಮಾಹಿತಿಗಾಗಿ ಒತ್ತಾಯ ಮಾಡುತ್ತೇವೆ ಮತ್ತು ತರಿಸುತ್ತೇವೆ ಅಲ್ಲದೆ ಇದರ ಬಗ್ಗೆ ಕೇಂದ್ರ ಸರ್ಕಾರ ಮತ್ತು ಭಾರತೀಯ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ಈ ವಿಚಾರವನ್ನು ತಿಳಿಸಿ ಈ ಬಗ್ಗೆ ಸರಿಯಾದ ಒಂದು

ಮಾಹಿತಿಯನ್ನು ಈ ವಿಧಾನ ಮಂಡಲಕ್ಕೆ ಒಪ್ಪಿಸಬೇಕೆಂಬ ಅಭಿಪ್ರಾಯ ನಮ್ಮ ಸರ್ಕಾರದ್ದು ಮತ್ತು ಈ ವಿಧಾನ ಮಂಡಲದ್ದು ಆಗಿರುವುದರಿಂದ ಇದನ್ನು ತರಿಸುತ್ತೇವೆ.

ಶ್ರೀ ಡಿ.ಬಿ.ಚಂದ್ರೇಗೌಡ :- ನಾನು ಒಂದು ಸಲಹೆಯನ್ನು ಕೊಡುತ್ತೇನೆ. The Minister concerned has approved the reply to this question and own his responsibility for having approved the answer should tender his resignation and I would appeal to the Chair to write to the Chief Justice. ಇದು ನನ್ನದಲ್ಲ. ಈ ಸದನಕ್ಕೆ ಸಂಬಂಧಪಟ್ಟ ವಿಚಾರ. ನೀವೇ ಇದನ್ನು ತರಿಸಿ. ಮಾನ್ಯ ಉಪಾಧ್ಯಕ್ಷೀಣಿಯವರೆ, ಈ ವಿಚಾರವನ್ನು ಮುಖ್ಯ ನ್ಯಾಯಾಧೀಶರ ಗಮನಕ್ಕೆ ತಂದು ಇಂದಿನ ಈ ಸಭೆಯಲ್ಲಿ ನಾವು ಅಭಿವ್ಯಕ್ತ ಮಾಡಿದಂಥ ಅಭಿಪ್ರಾಯವನ್ನು ಬರೆಯಬೇಕು. because we take it this as insult to the House. The Members work as representatives of the State. ಆದುದರಿಂದ ನಾನು ತಮಗೆ ಏನು ಹೇಳುತ್ತಿದ್ದೇನೆಂದರೆ, ಪುನಃ ನಾವು, ನೀವು, ಕುಳಿತು ಇದರ ಬಗ್ಗೆ ಚರ್ಚೆಮಾಡುವುದಕ್ಕೆ ಸರ್ಕಾರ ಮತ್ತು ವಿರೋಧಪಕ್ಷ ಅಲ್ಲ. ಒಟ್ಟು ಇಡೀ ಸದನವೇ ಈ ಒಂದು ಅಭಿಪ್ರಾಯಕ್ಕೆ ಬಂದಿದೆ ಎಂದು ತಾವು ಈ ವಿಚಾರವನ್ನು ಮುಖ್ಯ ನ್ಯಾಯಾಧೀಶರ ಗಮನಕ್ಕೆ ತರುತ್ತೇನೆ ಎನ್ನತಕ್ಕ ಆಶ್ವಾಸನೆಯನ್ನು ತಾವು ಈ ಸದನಕ್ಕೆ ಕೊಡಬೇಕು.

ಉಪಾಧ್ಯಕ್ಷೀಣಿಯವರು:- ಆಯಿತು, ಈಗ ಇದರ ಬಗ್ಗೆ ಇನ್ನೂ ಎಷ್ಟು ಚರ್ಚೆಮಾಡಬೇಕು ?

ಶ್ರೀ ವಾಟಾಳ್ ನಾಗರಾಜ್ :- ಇಲ್ಲಿಸರ್ಕಾರಕ್ಕೆ ಉತ್ತರವನ್ನು ಕೊಡುವುದಿಲ್ಲವೆಂದು ಹೇಳಿಲ್ಲ ನೇರವಾಗಿ ವಿಧಾನ ಮಂಡಲಕ್ಕೆ ಕಳುಹಿಸತಕ್ಕಂಥ ಅಗತ್ಯ ಇಲ್ಲ ಎಂದು ಇಲ್ಲಿ ನೇರವಾಗಿ ಹೇಳಿದ್ದಾರೆ. ಇದು ಸರ್ಕಾರದ್ದಾಗಿದ್ದರೆ ಬೇರೆ ಪ್ರಶ್ನೆಯಾಗುತ್ತಿತ್ತು. ಆದರೆ ವಿಧಾನ ಮಂಡಲಕ್ಕೆ ನಾವು ಯಾವುದನ್ನೂ ಒದಗಿಸುವುದಕ್ಕೆ ಸಾಧ್ಯವಿಲ್ಲ ಎಂದು ನೇರವಾಗಿ ಹೇಳಿದ್ದಾರೆ. ವಿಧಾನ ಮಂಡಲಕ್ಕೆ ನಾವು ಯಾವುದನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲವೆಂದು ನೇರವಾಗಿ ಹೇಳಿದ್ದು ಇಲ್ಲಿ ಇದೆ.

ಶ್ರೀ ಕೆ.ಹೆಚ್.ರಂಗನಾಥ್:- ಅಲ್ಲ ಅಲ್ಲ ಎಲ್ಲ ಪ್ರಶ್ನೆಗಳು ವಿಧಾನ ಮಂಡಲದ ಮಾಖಾಂತರವೇ ಬರುವುದು. ಪಿ.ಡಬ್ಲ್ಯೂ.ಡಿ ಅವರದು ಕೂಡ ಅದರ ಮುಖಾಂತರವೇ ಬರುತ್ತದೆ. ಅದಕ್ಕೆಮಾನ್ಯ ವಿರೋಧಪಕ್ಷದ ನಾಯಕರು ಸಲಹೆ ಮಾಡಿದ್ದಾರೆ. ನನ್ನ ಅಭಿಪ್ರಾಯದಲ್ಲಿ ತಮ್ಮ ಕಾರ್ಯಾಲಯವೇ ಉತ್ತರಗಳನ್ನು ತರಿಸುವುದು. ತಮ್ಮ ಕಾರ್ಯಾಲಯದ ಮುಖಾಂತರವೇ ತಮಗೆ ಕಳುಹಿಸಿದ್ದು ತಮ್ಮಿಂದ ನಮಗೆ ಬರುತ್ತದೆ. ಆದರೂ ಕೂಡ ಅಧ್ಯಕ್ಷರನ್ನು ಹೊಣೆ ಮಾಡತಕ್ಕಂಥದ್ದು ಸರಿಯಾದುದಲ್ಲ. ಮಾನ್ಯ ಮಂತ್ರಿಗಳು ನೇರವಾಗಿ ಚೀಫ್ ಸೆಕ್ರೆಟರಿಯವರ ಮುಖಾಂತರ ರಿಜಿಸ್ಟ್ರಾರ್‌ರವರಿಗೆ ಪತ್ರ ವ್ಯವಹಾರ ಮಾಡಿ ಪರಿಶೀಲನೆ ಮಾಡತಕ್ಕಂಥದ್ದು ಉತ್ತಮವೆಂದು ನನ್ನ ಭಾವನೆ.

ಉಪಾಧ್ಯಕ್ಷೀಣಿಯವರು:- ಈಗ ಪ್ರಶ್ನೋತ್ತರ ಕಾಲ ಮುಗಿಯಿತು. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ.ವೀರಪ್ಪ ಮೊಯಿಲಿ : (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಸನ್ಮಾನ್ಯ ಉಪಾಧ್ಯಕ್ಷೀಣಿಯವರೇ, ದಿನಾಂಕ 31-3-1992 ರಲ್ಲಿ ಲಿಖಿತಮೂಲಕ ಉತ್ತರಿಸುವ 26ನೇ ಪಟ್ಟಿಯಲ್ಲಿರುವ 14 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ 1254, 2326, ಮತ್ತು 2355 ಅನ್ನು ಹೊರತುಪಡಿಸಿ ಇನ್ನು ಉಳಿದ 11 ಚುಕ್ಕೆಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.